# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಟಿ.ಎ.ಶರವಣ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **204** |
| ಉತ್ತರಿಸಬೇಕಾದ ದಿನಾಂಕ | : | **14.02.2024** |
| ಉತ್ತರಿಸಬೇಕಾದ ಸಚಿವರು | : | ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2023-24ನೇ ಸಾಲಿನ ಆಯವ್ಯಯದಲ್ಲಿ ವಸತಿ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಒಟ್ಟು ಎಷ್ಟು ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು; (ಯೋಜನೆವಾರು ಮಾಹಿತಿ ನೀಡುವುದು)</td><td rowspan="2">2023-24ನೇ ಸಾಲಿನ ಆಯವ್ಯಯದಲ್ಲಿ ವಸತಿ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಒಟ್ಟು 3 ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ಈ ಪೈಕಿ 1.70 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ. 2024ರ ಜನವರಿ 31ರ ಅಂತ್ಯಕ್ಕೆ ಸಾಧಿಸಲಾದ ಪ್ರಗತಿಯ ವಿವರ ಯೋಜನವಾರು ಕೆಳಕಂಡಂತಿದೆ:
<table>
<tr><th>ಯೋಜನೆ</th><th>ಗುರಿ</th><th>ಸಾಧಿಸಲಾದ ಪ್ರಗತಿ</th></tr>
<tr><td>ಬಸವ ವಸತಿ ಯೋಜನೆ</td><td>125000</td><td>77978</td></tr>
<tr><td>ಡಾ|| ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ</td><td>50000</td><td>32243</td></tr>
<tr><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ)</td><td>20000</td><td>8316</td></tr>
<tr><td>ದೇವರಾಜ ಅರಸು ವಸತಿ ಯೋಜನೆ</td><td>10000</td><td>6960</td></tr>
<tr><td>ವಾಜಪೇಯಿ ನಗರ ವಸತಿ ಯೋಜನೆ</td><td>7000</td><td>5850</td></tr>
<tr><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನ)</td><td>88000</td><td>39314</td></tr>
<tr><td>ಒಟ್ಟು</td><td>300000</td><td>170661</td></tr>
</table>
"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯ" ವಿವರ:<br>
"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ"ಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಮನೆಗಳು ಹಾಗೂ ಸಾಧಿಸಲಾಗಿರುವ ಪ್ರಗತಿ ಈ ಕೆಳಕಂಡಂತಿದೆ.
<table>
<tr><th rowspan="2">ಯೋಜನೆ</th><th rowspan="2">ಗುರಿ</th><th colspan="3">ಸಾಧಿಸಲಾದ ಪ್ರಗತಿ</th></tr>
<tr><th>ಮುಕ್ತಾಯ ಹಾಗೂ ಮುಕ್ತಾಯ ಹಂತ</th><th>ಛಾವಣಿ ಪೂರ್ಣ</th><th>ವಿವಿಧ ಹಂತ</th></tr>
<tr><td>"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" (1BHK)</td><td>52,738</td><td>7,368</td><td>6,393</td><td>38,977</td></tr>
<tr><td>"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"(2BHK)</td><td>6,741</td><td>304</td><td>1,702</td><td>4,735</td></tr>
</table>
</td></tr>
<tr><td>ಆ)</td><td>2024ರ ಜನವರಿ 31ರ ಅಂತ್ಯಕ್ಕೆ ಸದರಿ ಯೋಜನೆಗಳಲ್ಲಿ ಸಾಧಿಸಲಾದ ಗುರಿ ಮತ್ತು ಪ್ರಗತಿಯ ಸಂಪೂರ್ಣ ವಿವರ ನೀಡುವುದು.</td></tr>
</table>

| | | |
|---|---|---|
| ಇ) | ವಸತಿ ಇಲಾಖೆಯು ಕೈಗೊಂಡಿರುವ ಒಟ್ಟು ಕಾಮಗಾರಿಗಳು ಎಷ್ಟು; ಈ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಪಾವತಿಸಿದ ಮತ್ತು ಪಾವತಿಗೆ ಬಾಕಿ ಉಳಿಸಿಕೊಂಡಿರುವ ಒಟ್ಟು ಮೊತ್ತ ಎಷ್ಟು ಪಾವತಿಗೆ ಬಾಕಿ ಉಳಿಯಲು ಕಾರಣಗಳೇನು: | ವಿವಿಧ ವಸತಿ ಯೋಜನೆಗಳಡಿ ಮನೆಗಳನ್ನು ಫಲಾನುಭವಿಗಳೇ ಸ್ವತಃ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಯಾವುದೇ ಮನೆಗಳ ನಿರ್ಮಾಣವನ್ನು ಗುತ್ತಿಗೆದಾರರಿಗೆ ನೀಡಿರುವುದಿಲ್ಲ.<br><br>"1 **ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ**" ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನಿಯಮಾನುಸಾರ ವಹಿಸಲಾಗಿರುತ್ತದೆ.<br><br>PMAY (U) AHP ಘಟಕದಡಿ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ 44 ವಿವಿಧ ವಸತಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. |
| ಈ) | ಯಾವ ಕಾಲದಲ್ಲಿ ಬಾಕಿ ಮೊತ್ತವನ್ನು ಪಾವತಿಸಲಾಗುವುದು? | 1. ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ ಒಟ್ಟು 78 ವಿವಿಧ ಯೋಜನಾ ಸ್ಥಳಗಳಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು, ನಿರ್ವಹಿಸಲಾದ ಕಾಮಗಾರಿಗಳಿಗೆ ಈವರೆಗೆ ಒಟ್ಟು ರೂ.1488.61ಕೋಟಿಗಳನ್ನು ಪಾವತಿಸಲಾಗಿದ್ದು, ಪ್ರಗತಿಗೆ ಅನುಗುಣವಾಗಿ ಇನ್ನೂ ರೂ.102.14 ಕೋಟಿಗಳನ್ನು ಪಾವತಿಸಲು ಬಾಕಿ ಇರುತ್ತದೆ.<br><br>ಫಲಾನುಭವಿಗಳ ವಂತಿಕೆ ಹಾಗೂ ಬ್ಯಾಂಕ್ ಸಾಲದ ಮೂಲಕ ಅನುದಾನವನ್ನು ಕ್ರೋಢೀಕರಿಸಲಾಗುತ್ತಿದ್ದು, ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಇರುವ ಮೊತ್ತವನ್ನು ಪಾವತಿಸಲು ಕ್ರಮವಹಿಸಲಾಗುವುದು.<br><br>2. ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಂದ ಒಟ್ಟು 44 ವಿವಿಧ ಯೋಜನಾ ಸ್ಥಳಗಳಲ್ಲಿ ಒಟ್ಟು 52189 ಕಾಮಗಾರಿಗಳನ್ನು ಕೈಗೊಂಡಿದ್ದು, ನಿರ್ವಹಿಸುತ್ತಿರುವ ಕಾಮಗಾರಿಗಳಿಗೆ ಈವರೆಗೆ ಒಟ್ಟು ರೂ.623.00 ಕೋಟಿಗಳನ್ನು ಪಾವತಿಸಲಾಗಿದ್ದು, ಪ್ರಗತಿಗೆ ಅನುಗುಣವಾಗಿ ಇನ್ನೂ ರೂ.21.00 ಕೋಟಿಗಳನ್ನು ಪಾವತಿಸಲು ಬಾಕಿ ಇರುತ್ತದೆ.<br><br>ಫಲಾನುಭವಿಗಳ ವಂತಿಕೆ ಹಾಗೂ ಬ್ಯಾಂಕ್ ಸಾಲದ ಮೂಲಕ ಅನುದಾನವನ್ನು ಕ್ರೋಢೀಕರಿಸಲಾಗುತ್ತಿದ್ದು, ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಇರುವ ಮೊತ್ತವನ್ನು ಪಾವತಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ವಇ 30 ಹೆಚ್‌ಎಂ 2024

(**ಬಿ.ಜೆಡ್. ಜಮೀರ್ ಅಹ್ಮದ್ ಖಾನ್**)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು